

ಹುಡುಗರ ಸಂಗಡ ಬಂದ. ಮೊಬ್ಬಳ್ಳಿ ಬೀದಿ ತುಂಬಾ ಗುಡಿ ಪ್ರವೇಶ ಸಮಾರಂಭದ ಬಗ್ಗೆ ಪೋಸ್ಟರ್‌ಗಳ್ನ ಅಂಟಿಸಿದ. ಮುಂದಿನ ವಾರ ಸರ್ವರ ಸಮಕ್ಷಮ ದಲಿತರ ಗುಡಿ ಪ್ರವೇಶವೆಂದು ಡಂಗೂರ ಸಾರಿಸಿದ. ಊರ್ನಾಗೋಗಿ ಗೌಡನ್ನ ಶಾನುಭೋಗಕ್ರಪ್ಪನ ಕಂಡು 'ನಿಮ್ಮ ಸಹಕಾರ ಬೇಕಪ್ಪ. ಹಟ್ಟಿ ಜನನ್ನಾ ನಾವೇನ್ ನಿಮ್ಮ ಮನೆಯೊಗೆ ನುಗ್ಗುಸ್ತೀವಾ? ಗುಡಿಯಾಗೆ ಹೋಗ್ತಿದಿವಿ. ದೇವರು ಅಂಬೋನು ಎಲ್ಲರಿಗೂ ಸೇರಿದನಲ್ಲವರಾ?', ಏನೇನೋ ಬೆಣ್ಣೆನಾಗೆ ಕೂದ್ಲು ತೆಗೆಯುವಂತೆ ಮಾತಾಡುವಾಗ ನಾನು ಜೊತೆನಾಗೇ ಇದ್ದೆ.

ಗೌಡರಾಗ್ಲಿ, ಊರಿನ ಜನವಾಗ್ಲಿ ತುಟಿ ಬಿಚ್ಚಲಿಲ್ಲ, ಕೆಕ್ಕರಿಸಿಕೊಂಡು ನೋಡಿದರು. ಗುಡಿ ಪ್ರವೇಶ ಮಾಡೋ ದಿನ ಬಂದೇ ಬಿಡ್ತು. ಸಿದ್ದೇಶ ಪೇಟೆಯಿಂದ ಜನರನ್ನು ಕರೆಸಿ ದಾರಿ ಉದ್ದಕೂ ಗುಡಿವರೆಗೂ ತಳಿರು ತೋರಣ ಕಟ್ಟಿ ಸುಂಗಾರ ಮಾಡಿದ. ಓಲುಗದೋರೂ ಬಂದರು. ಪೊಲೀಸು ವ್ಯಾನೂ ಬಂತು. ಕಾರಿನಾಗೆ ತಹಶೀಲ್ದಾರದ್ರೂ ಇಳ್ಕಂಡ್ರು. ಸಿದ್ದೇಶಿ ಜೊತೆನಾಗೆ ಊರೊಳಾಕೆ ಹೋದ ತಹಶೀಲ್ದಾರ್, ಗೌಡ್ರು, ಶಾನುಭೋಗರ ಸಹಕಾರ ಕೇಳಿದರು.

'ಈ ಗುಡಿ ನಿಮ್ಮ ಸ್ವಂತದ್ದಲ್ಲ, ಮುಜರಾಯಿಗೆ ಸೇರ್ಪಡೆಯಾಗದೆ, ಸಹಕಾರ ನೀಡಿ ದೊಡ್ಡವರಾಗಿ. ನಿಮ್ಮ ಮೊಬ್ಬಳಿ ರಾಜ್ಯದಾಗೇ ಹೆಸರಾಗುತ್ತೆ' ಅಂತೆಲ್ಲಾ ತಹಶೀಲ್ದಾರ್ ತಿಳಿಹೇಳಿದರು.

'ಗುಡಿ ಬಾಗಿಲು ತೆಗ್ರಿರಪ್ಪಾ ಶಾನುಭೋಗ್ರೆ' ಅಂತ ಸ್ವಲ್ಪವೇ ಸ್ವಲ್ಪ ಗದರಿದ್ದೂ ಆತು.

'ಆತುಹೋಗ್ರಿ,ನಾವ್ಯಾರುಆಕಡೆತೆಲೆಹಾಕಿಯೂ ಮಲ್ಗಾಕಿಲ್ಲ' ನೀವು ಮಾಡ್ಕಳಿ. ನಮ್ಮ ಶಾನುಭೋಗ ಬಂದು ಪೂಜೆ ಮಾಡ್ಕೋಡ್ತಾನೆ ಹೋಗ್ರಿ' ಎಂದು ಗೌಡ್ರು ದೊಡ್ಡದಾಗಿ ಕೈ ಮುಗಿದದ್ದೂ ಆತು.

'ಅಡ್ಡಿ ಮಾಡಿದ್ರೆ ಯಾರೇ ಆಗಿರ್ಲಿ ಅರೆಸ್ಟರ್ ಮಾಡಿ ಕಾನೂನು ಪ್ರಕಾರ ಕ್ರಮ ತೆಗೋತೀವಿ... ಬಿಕೇರ್‌ಫುಲ್' ಅಂತ ತಹಶೀಲ್ದಾರ್ರು ಗರಂ ಆದಾಗ ಪೊಲೀಸ್ ಇನ್ಸ್‌ಪೆಕ್ಟರ್ ಅವರ ತಂಡ ಹಿಂದಾಗಡೆನೇ ನಿಂತಿತ್ತು.

* * *

ತಹಶೀಲ್ದಾರ್‌ರ ಮುಖಂಡತ್ವೆದಾಗೆ ಇಡೀ ಹಟ್ಟಿ ಜನ ಗುಡಿಕಡೆ ಮೆರವಣಿಗೆ ಹೊಂಟಿತು. ಎಲ್ಲರ ಮಕದಾಗೆ ಏನೋ ಕುಸಿ. ಓಲಗ ತಮಟೆ ಎಲ್ಲಾ ಇಡೀ ಮೊಬ್ಬಳಿಗೆ ಕೇಳೋವಂಗೆ ಬಡಿದರು. ಹಟ್ಟಿ ಹೆಣ್ಣುಮಕ್ಕಳು ಸಣ್ಣಮಕ್ಕಳು ಜೊತೆಗೊಡಿದರು. ಒಂದಷ್ಟು ಹೆಣ್ಣು ಮಕ್ಕಳು ನಮಗಿಂತ ಮುಂಚೆ ಹೋಗಿ ಕಾಂಪೌಂಡ್ ಆಚ್ಗೆ ರಂಗೋಲಿ ಬಿಡಿಸಿ ಬಂದರು. ಗುಡಿದಿರ್ಲಿ ಮಾದ್ವಾರದ್ದೇ ಬಾಗಿಲು ತೆಗೆದಿಲ್ಲ ಅಂತ ಹೆಂಗ್ರಸರು ಸುದ್ದಿ ಮುಟ್ಟಿಸಿದರು.

'ಮತ್ತೆ ಹೆಂಗೆ ಸಾರ್?' ಸಿದ್ದೇಶಿ ತಹಶೀಲ್ದಾರ್ಗೆ ಕೇಳಿದ. 'ನಾವು ಅಲ್ಲಿಗೆ ಹೋಗ ಹೊತ್ತಿಗೆ ಬಂದು ತೆಗೆದಾರು, ಡೋಂಟ್‌ವರಿ' ಅಂದರು ತಹಶೀಲ್ದಾರ್. ಗುಡಿ ಮುಂದೆ ಬಂದು ಹಟ್ಟಿಜನ ನಿಂತಿದ್ದಾತು. ನಮ್ಮನ್ನ ಬಿಟ್ರೆ ಊರಿನ ಒಂದು ನರಪ್ರಾಣಿಯೂ ಕಾಣಲಿಲ್ಲ. ತಹಶೀಲ್ದಾರ್ರಿಗೂ ಒಂತರಾ ಟೆನ್ಶನ್ ಆತು. ಅಷ್ಟ್ರಾಗೆ ಶಾಣುಭೋಗರ ಮಗ ಓಡ್ಕಂಡು ಬಂದು 'ತಗಳ್ಳಿ ಸಾ ಗುಡಿದೂ ಕಾಂಪೌಂಡ್, ದ್ವಾರದ್ದೂ ಕೀಲಿ' ಅಂತ ತಹಶೀಲ್ದಾರ್‌ರಿಗೆ ಕೀಲಿ ಒಪ್ಪಿಸಿದ.

'ಅಲ್ಲಯ್ಯ ನಿಮ್ಮ ತಂದೆ ಬರಲಿಲ್ವೆನಪ್ಪಾ? ಪೂಜೆ ಮಾಡೋದ್ಯಾರು?' ಕಸವಿಸಿಗೊಂಡರು ತಹಶೀಲ್ದಾರ್.

'ಕೊಟ್ಟು ಬಾ ಅಂತ ಹೇಳಿದರು ಸಾ', ಅಂದವನೆ ಶಾನುಭೋಗರ ಮಗ ಅಲ್ಲಿಂದ ಓಟಕಿತ್ತ.

'ಈಗ ಮತ್ತೆಂಗೆ ಸಾರ್?', ನಮ್ಮ ಸಿದ್ದೇಶಿ ತಹಶೀಲ್ದಾರರ ಬಳಿ ಬಂದು ತಹತಹಿಸಿದ.

'ಹೋಗ್ಲಿಬಿಡ್ರಿ, ಊರಿನ ಜನ ಸೇರಿ ಒಂದ್ಗೋಗಿ ಒಂದಾಗೋಕಿಂತ ಇದೂ ಬೆಸ್ಟ್. ತಗೊಳ್ಳಿ ಕೀಲಿ ಕೈ. ಬಾಗಿಲು ತೆಗೀರ. ಪೂಜೆ ನಾವೇ ಮಾಡಿದರಾಯ್ತು. ದೇವರೇನು ಬ್ಯಾಡ ಅಂತಾನೇನೋ ನೋಡೇ ಬಿಡೋಣ' ಎಂದು ತಹಶೀಲ್ದಾರ್ ಹುರಿದುಂಬಿಸಿದರು.

ಮಹಾದ್ವಾರ ತೆಗೆದಾಗ ಓಲಗ ಡೊಳ್ಳು ತಪಡೆ ಮೊಳಗಿ ಹಟ್ಟಿ ಜನರನ್ನು ಹುರಿದುಂಬಿಸಿದವು. ಎಲ್ಲರೂ ಹುಮ್ಮಸ್ಸಿನಿಂದ ಒಳನುಗ್ಗಿದರು. ಹಲವರ ಕೈನಲ್ಲಿ, ಬ್ಯಾಗಲ್ಲಿ ಹಣ್ಣು ಹೂವು ಇದ್ದವು. ಹಟ್ಟಿ ಯಜಮಾನ ಎಂಕ್ಟಜ್ಜ ತನ್ನ ಕೊರಳಿಗೆ ಅಂಬೇಡ್ಕರ್ ಪಟ ನೇತು ಹಾಕ್ಕೊಂಡಿದ್ದ. ಹುರುಪಿನಿಂದ 'ಜೈ ಭೀಮ್' ಎಂದು ಏರು ಧ್ವನಿ ಹೊರಡಿಸಿದ. ಜೈ ಭೀಮ್ ಅಂತ ಒಟ್ಟಿಗೆ ಎಲ್ಲರೂ ಒಂದೇ ಉಸಿರಲ್ಲಿ ಕೂಗಿದರು ತಪಡೆಗಳು ಬಿರಿದವು.

ಅವರಿಗೆಲ್ಲಾ ದೇವಸ್ಥಾನ ಹೊಸದು. 'ಇದು ಗುಡಿ ಅಲ್ಲ ಕಣ್ರಲಾ, ದೇವಸ್ಥಾನ ಅಂಬ್ತಾರಲ್ಲ ಅದೇ ಇದು' ಎಂದು ನಿಬ್ಬೆರಗಾಗಿ ಅತ್ತಿತ್ತ ನೋಡುತ್ತಾ ಮೆಟ್ಟಿಲುಗಳನ್ನು ಏರಿದರು. ಮತ್ತೆ 'ಜೈ ಭೀಮ್' ಕೂಗು ಮುಗಿಲು ಮುಟ್ಟಿತ್ತು. ಖುಷಿಯ ಗದ್ದಲ ಮಕ್ಕಳ ಕಲರವವೂ ಸೇರಿ ಗುಡಿಗೊಂದು ಹೊಸಕಳೆಯೂ ಬಂತು. ಸಿದ್ದೇಶಿಯಂತೂ ಹಿಗ್ಗಿನಿಂದ ಎರಡು ಸ್ಟೇಪ್ ಹಾಕತ್ಲು, ಹಟ್ಟಿ ಹುಡುಗರು ವಾದ್ಯಗಳ ಲಯಕ್ಕೆ ಕುಸಿಯಿಂದ ಚಿಮ್ಮುವ ಕಾರಂಜಿಯಂತಾದರು.

ಸಿದ್ದೇಶ ತಾನೆ ಹೋಗಿ ಗರ್ಭಗುಡಿ ಬೀಗ ತೆಗೆದು ಬಾಗಿಲು ದೂಡಿದ. ನಿಂತಲ್ಲೇ ಗರಬಡಿದವನಂತಾದ. 'ಸಾರ್ ದೇವರೇ ಇಲ್ಲವಲ್ಲ ಸಾ' ಅರಚಿದ.

ವಾದ್ಯಗಳ ಗದ್ದಲದಲ್ಲಿ ಅವನ ಕೂಗು ಯಾರಿಗೂ ನೆಟ್ಟಗೆ ಕೇಳಲಿಲ್ಲ. ಗರ್ಭಗುಡಿಯತ್ತ ಸರಸರನೆ ನಡೆದು ಹೋದ ತಹಶೀಲ್ದಾರ್‌ರೂ, ಪೊಲೀಸ್ ಸಿಬ್ಬಂದಿಯೂ ಅವಕ್ಕಾದರು. 'ನರಸಿಂಹಸ್ವಾಮಿ ದೇವರು ವಿಗ್ರಹ ಎಲ್ರೀ?' ಒಬ್ಬರನ್ನೊಬ್ಬರು ಕೇಳ್ತಾ ದಂಗಾದರು. ಎಲ್ಲರ ಮುಖದಲ್ಲೂ ಅದೇ ಪ್ರಶ್ನೆ ಉತ್ತರ ಮಾತ್ರ ಕಾಣದು. ಗದ್ದಲವೆಲ್ಲಾ ಕ್ಷಣದಲ್ಲೇ ಹಿಂಗಿ ಹೋಯಿತು. ವಾದ್ಯಗಳೂ ಸ್ತಬ್ಧ.

'ಇದೆಲ್ಲಾ ಗೌಡರದ್ದೇ ಕಿತಾಪತಿ. ಅವರನ್ನೇ ಕೇಳೋಣ ದೇವರೆಲ್ಲಿ ಅಂತ?' ಎಗರಾಡಿದ ಸಿದ್ದೇಶಿ.

'ಹೌದು ತನಿಖೆಯಾಗಬೇಕು?', ತಹಶೀಲ್ದಾರ್ ಗುಡುಗಿದರು.

'ಐ ವಿಲ್ ಟೇಕ್ ಸ್ಯೂಟಬಲ್ ಆಕ್ಷನ್' ಇನ್ಸ್‌ಪೆಕ್ಟರ್ ರಾಂಗ್ ಆದರು.

'ದ್ಯಾವ್ರಿಲ್ಲ ಅಂತ ತಾನೆ ನಿಮ್ಗೆ ಸಿಟ್ಟು? ಅದಕ್ಯಾಕೆ ಸಿಟ್ಟು ಸೆಡವು? ಇಲ್ಲದಾನಲ್ಲ? ದೇವರಲ್ಲವಾ ಈ ಮಾನುಭಾವ?' ಅಂದವನೆ ಹಟ್ಟಿ ಮುತ್ಯಾ ಎಂಕ್ಟಜ್ಜ ತನ್ನ ಕೊರಳಲ್ಲಿದ್ದ ಅಂಬೇಡ್ಕರ್ ಪಟ ತೆಗೆದವನೇ ಗರ್ಭಗುಡಿಯಾಗಿಟ್ಟು, ಹೆಣ್ಣುಮಕ್ಕಳಿಂದ ಹೂವಿನ ಹಾರ ಪಡೆದು ಪಟಕ್ಕೆ ಹಾಕಿದ. ಎಲ್ಲೆಲ್ಲೂ ಜೈ ಭೀಮ್ ಎಂದ ಕೂಗು ಮುಗಿಲು ಮುಟ್ಟಿತು. ಸದ್ದಡಗಿದ್ದ ಓಲಗ, ಡೊಳ್ಳು, ತಪಡೆಗಳು, ಸನಾಯಿಗಳಿಗೆ ಹೋದ ಜೀವ ಮರಳಿ ಬಂತು. ಸಡಗರವೋ ಸಡಗರ. ಎಲ್ಲರ ಬತ್ತಿಹೋದ ಮೋರೆಯಲ್ಲಿ, ನಿಸ್ತೇಜವಾದ ದೇಹದಲ್ಲಿ ಜೀವಸಂಚಾರ. ಎಲ್ಲೆಲ್ಲೂ ಕುಣಿತ ಶಿಳ್ಳೆ, ಕೇಕೆ. ತಹಶೀಲ್ದಾರ್ ಇನ್ಸ್‌ಪೆಕ್ಟರ್ ಪೊಲೀಸ್‌ರ ಮೋರೆಯಲ್ಲೂ ಹೊಸ ಕಳೆ. ಸಂತೋಷ ತಾಳಲಾರದಾದ ಸಿದ್ದೇಶಿ ಬಿಕ್ಕಿ ಬಿಕ್ಕಿ ಅಳುತ್ತಿದ್ದುದೂ ಕಂಡಿತು.

ಪ್ರತಿಕ್ರಿಯಿಸಿ: **feedback@sudha.co.in**